## 21 ರೂಗೆ ಒಂದಾಣೆ ಬಡ್ಡಿ

ಬ್ಯಾಂಕುಗಳು, ಅಂಚೆ ಕಚೇರಿಗಳಲ್ಲಿ ಇಟ್ಟ ಠೇವಣಿಗಳಿಗೆ, ಉಳಿತಾಯ ಖಾತೆಗಳ ಹಣಕ್ಕೆ ವಾರ್ಷಿಕ ಬಡ್ಡಿ ಈಗ ಕಡಿಮೆಯಾಗುತ್ತಿದೆ. ಒಂದು ನೂರು ವರ್ಷಗಳ ಹಿಂದೆ ಠೇವಣಿಗಳಿಗೆ ನೀಡುತ್ತಿದ್ದ ಬಡ್ಡಿಯನ್ನು ನೋಡಿದಾಗ ಇಂದಿನ ಪರಿಸ್ಥಿತಿ ವಿಶೇಷವೇನಲ್ಲ ಎನಿಸುತ್ತದೆ. 1894ರಲ್ಲಿ ಮೈಸೂರು ಸರ್ಕಾರವು ದಿ ಗೌರ್ನಮೆಂಟ್ ಸೇವಿಂಗ್ಸ್ ಆ್ಯಕ್ಟ್– 1873ರ ಪ್ರಕಾರ ಉಳಿತಾಯ ಖಾತೆಯಲ್ಲಿದ್ದ 21 ರೂಗಳಿಗೆ ಒಂದು ಆಣೆ (16 ಆಣೆಗೆ ಒಂದು ರೂಪಾಯಿ) ಬಡ್ಡಿ ನೀಡುತ್ತಿತ್ತು.

ತಿಂಗಳ 5ನೇ ತಾರೀಖಿನಿಂದ ತಿಂಗಳ ಕೊನೆಯ ದಿನದವರೆಗೆ ಇದ್ದ ಮೊತ್ತವನ್ನು ಬಡ್ಡಿ ಲೆಕ್ಕಕ್ಕೆ ಪರಿಗಣಿಸಲಾಗುತ್ತಿತ್ತು. ಒಂದು ರೂಪಾಯಿ ನೀಡಿ ಖಾತೆ ತೆರೆಯಬಹುದಾಗಿತ್ತು. ಒಂದು ವರ್ಷದ ಅವಧಿಯಲ್ಲಿ ಖಾತೆದಾರರು 5000 ರೂಗಳವರೆಗೆ ಮಾತ್ರ ಠೇವಣಿ ಮಾಡಬಹುದಾಗಿತ್ತು.

—ಎಸ್.ಎನ್. ಅಶೋಕಕುಮಾರ್, ಶ್ರವಣಬೆಳಗೊಳ


Notification by the Govt. of Mysore,

FINANCIAL DEPARTMENT.

NOTIFICATION No. 161.

The 14th December 1887.

I.—In these Rules—

"Depositor" and "Deposit" bear the meaning which they bear in The Government Savings Bank Act, 1873.

"Account" means the account of a Depositor in a Government Savings Bank.

"Balance" means the balance at credit of an account.

II.—Any person may become a Depositor on his own behalf or on behalf of any other named person dependent upon him. ...

III.—Subject to the provisions of these Rules, the Government of Mysore guarantees the repayment of every deposit with interest.

IV.—Without the sanction of the Comptroller, no account will be opened for less than One Rupee and no person may deposit more than Five Thousand Rupees in all between any 1st of July and the 30th June next following.

V.—Interest will not be allowed upon a smaller balance than (1¾) one and three-quarters of a rupee, or upon the excess in any balance over the highest multiple of (1¾) one and three-quarters a rupee.—(Vide Government Notification No. 13976—R. 1443, dated 17th February 1894).

SAVINGS BANK RULES. 2

VI.—Interest will be allowed for each calendar month upon the minimum balance of the account between the close of the fourth day and the end of the month.

VII.—From 1st July 1894 till further notice, interest will be allowed upon deposits at the rate of one pie a month for every (1¾) one and three-quarters of a rupee, which is equal to one anna for every (21) twenty-one rupees, being at the rate of Rs. (3⁴⁄₇) three and four-sevenths per centum per annum. Without the sanction of the Comptroller, no higher monthly interest will be allowed upon any balance than Rs. 14-14-1, being the interest upon Rs. 5,000.

In calculating interest, one anna will be taken as the interest for one month on every twenty-one rupees of the amount entitled to bear interest, and for broken sums below twenty-one rupees the following table will be used :—

| Principal. | Interest. | Principal. | Interest. |
|---|---|---|---|
| Rs. a. p. | A. p. | Rs. a. p. | A. p. |
| 1 12 0 | 0 1 | 12 4 0 | 0 7 |
| 3 8 0 | 0 2 | 14 0 0 | 0 8 |
| 5 4 0 | 0 3 | 15 12 0 | 0 9 |
| 7 0 0 | 0 4 | 17 8 0 | 0 10 |
| 8 12 0 | 0 5 | 19 4 0 | 0 11 |
| 10 8 0 | 0 6 | 21 0 0 | 1 0 |

Example.—Required interest for one month on Rs. 134-6-10.

| | Rs. a. p. | | A. p. |
|---|---|---|---|
| Interest on .. | 126 0 0 | | 6 0 |
| Interest on .. | 8 6 10 | | 0 4 |
| Total .. | 134 6 10 | Total .. | 6 4 |

(Vide Government Notification No. 13976—R. 1443, dated 17th February 1894.)



## ವಿದ್ಯಾರ್ಥಿಗಳಿಗೆ ನಾಟಿ ಪಾಠ!

ರೈತರು ಭತ್ತದ ಗದ್ದೆಯಲ್ಲಿ ನಾಟಿ ಮಾಡುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು. ಈ ಸಮಯದಲ್ಲಿ ಭತ್ತದ ಸೀಮೆಗಳಲ್ಲಿ ರೈತರು ಗದ್ದೆಯತ್ತಲೇ ಮುಖ ಮಾಡಿರುತ್ತಾರೆ. ಏಕೆಂದರೆ ಇದು ನಾಟಿ ಮಾಡವ ಕಾಲ.

ಇಲ್ಲಿ ಭತ್ತದ ಸಸಿ ನೆಡುತ್ತಿರುವವರು ಶಾಲಾ ಮಕ್ಕಳು. ಸಾಗರ ತಾಲ್ಲೂಕಿನ ಕೋಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಿಣಿವಾರು ಕೊಡಚಾದ್ರಿ ಆಂಗ್ಲ ಮಾಧ್ಯಮ ವಸತಿ ಶಾಲೆಯ ಮಕ್ಕಳನ್ನು ಗದ್ದೆಗೆ ಕರೆದೊಯ್ದು ಬದುಕಿನ ಪಾಠ ಕಲಿಸಲಾಯಿತು. ಮೂರು ವರ್ಷಗಳಿಂದ ಮಕ್ಕಳನ್ನು ಈ ಸಮಯದಲ್ಲಿ ಗದ್ದೆಗೆ ಕರೆದೊಯ್ದು ಬದುಕಿಗೆ ಆಸರೆಯಾಗುವ ಪಾಠವನ್ನು ಹೊಲದಲ್ಲಿ ಹೇಳಿಕೊಡಲಾಗುತ್ತಿದೆ.

ಮಕ್ಕಳಿಗೆ ಪಠ್ಯದ ಜತೆ ಪಠ್ಯೇತರ ಚಟುವಟಿಕೆಯೂ ಮುಖ್ಯ. ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಸಾಹಿತ್ಯ, ಸಂಗೀತ, ನಾಟ್ಯ, ಚಿತ್ರಕಲೆ, ಯಕ್ಷಗಾನ, ಮಲ್ಲಗಂಬ ಮುಂತಾದ ಚಟುವಟಿಕೆಯಲ್ಲಿ ತೊಡಗಿಸುತ್ತೇವೆ ಎಂದು ಈ ಶಾಲೆಯ ಆಡಳಿತ ಮಂಡಳಿಯ ಮುಖ್ಯಸ್ಥ ಪ್ರಕಾಶ್ ಕೆ.ಆರ್. ಹೇಳುತ್ತಾರೆ. ಅಂದಹಾಗೆ ಈ ಶಾಲೆಯ ಮಕ್ಕಳು ಓದಿನಲ್ಲೂ ಮುಂದಿದ್ದಾರೆ.

—ಗಣಪತಿ ಶಿರಳಗಿ, ಸಾಗರ

## ಒಲಿಂಪಿಕ್ಸ್ ರಾಖಿ

ಜಾತಿ, ಧರ್ಮ, ವರ್ಣ, ಭಾಷೆಗಳನ್ನು ಮೀರಿ ಸಹೋದರತ್ವದ ಭಾವನೆಯಿಂದ ವಿಶ್ವ ಕ್ರೀಡಾ ಕೂಟ ಟೋಕಿಯೊದಲ್ಲಿ ಒಲಿಂಪಿಕ್ 2020 ಇತ್ತೀಚೆಗೆ ಅದ್ದೂರಿಯಾಗಿ ತೆರೆ ಬಿದ್ದಿದೆ. ಸಹೋದರತ್ವದ ಮಹತ್ವವನ್ನು ಸಾರುವ... ಬಾಂಧವ್ಯ ಬೆಸೆಯುವ ಸಾಂಪ್ರದಾಯಿಕ ಹಬ್ಬ ರಕ್ಷಾ ಬಂಧನ.

ಕೊರೊನಾ ಮಹಾಮಾರಿ ನಮ್ಮನ್ನು ಯಾವ ಗಳಿಗೆಯಲ್ಲಿ ವಕ್ಕರಿಸುತ್ತದೆ ಎಂಬ ಭಯದ ನಡುವೆ ದಾವಣಗೆರೆಯ ರಘುನಾಥರಾವ್ ಅವರು ಸೃಜನಶೀಲತೆಯಿಂದ ಆಕರ್ಷಕ ರಾಖಿಯನ್ನು ಮಾಡಿದ್ದಾರೆ. ಇಲ್ಲಿರುವ ರಾಖಿಗಳನ್ನು ನೋಡಿ... ಅರೇ...ಇತ್ತೀಚೆಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಪದಕಗಳನ್ನು ಗೆದ್ದು ತಂದವರಲ್ಲವೇ? ಹೌದು... ಈ ರಾಖಿಯಲ್ಲಿರುವ ಚಿನ್ನದ ಹುಡುಗ ನೀರಜ್ ಚೋಪ್ರಾ, ಬೆಳ್ಳಿಯ ಬೆಡಗಿ ಮೀರಾಬಾಯಿ ಚಾನೂ, ಕುಸ್ತಿಯಲ್ಲಿ ಕಮಾಲ್ ಮಾಡಿ ಕಂಚಿನ ಪದಕದೊಂದಿಗೆ ಮಿಂಚಿದ ಬಜರಂಗ್ ಪೂನಿಯಾ... ವಾಂವ್ ಎಷ್ಟು ಆಕರ್ಷಕವಾಗಿವೆ ಅಲ್ಲವೇ?

—ಅನುರಾಧ ಟಿ. ದಾವಣಗೆರೆ

